# ಮಾದರಿ ಪ್ರಶ್ನೆಪತ್ರಿಕೆ (2) ನೀಲಿನಕ್ಷೆ - 2024-25
# ದ್ವಿತೀಯ ಪಿಯುಸಿ ಐಚ್ಛಿಕ ಕನ್ನಡ (16)

| ಕ್ರ.ಸಂ | ಪಠ್ಯಗಳು | ಬೋಧನಾ ಅವಧಿ | ನಿಗಧಿಪಡಿಸಿದ ಅಂಕಗಳು | ಸ್ಮರಿಸು | | | | | ಗ್ರಹಿಸು | | | | ಅನ್ವಯಿಸು | | | | ವಿಶ್ಲೇಷಿಸು ಮೌಲ್ಯಮಾಪನ ಮಾಡು ಸೃಜಿಸು | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 3 | 4 | 5 | 1 | 2 | 3 | 4 | 1 | 2 | 3 | 4 | 1 | 2 | 3 | 4 |
| 01 | ಚಂಪೂ-ಪಂಪ | **10** | **10** | **01** | **01** | | | | | | **01** | **01** | | | | | | | | |
| 02 | ಚಂಪೂ-ಷಡಕ್ಷರದೇವ | **10** | **10** | **01** | **01** | | | | | | **01** | | | | | **01** | | | | |
| 03 | ರಗಳೆ - ಹರಿಹರ | **06** | **06** | **01** | **01** | | | | | | | | | | **01** | | | | | |
| 04 | ಷಟ್ಪದಿ - ಚಾಮರಸ | **07** | **07** | **01** | **01** | | | | | | | **01** | | | | | | | | |
| 05 | ಶತಕ - ಚಿಕ್ಕುಪಾಧ್ಯಾಯ | **07** | **07** | | | | | | | | **01** | **01** | | | | | | | | |
| 06 | ತ್ರಿಪದಿ- ಸರ್ವಜ್ಞ | **07** | **07** | **01** | **01** | | | | | | | **01** | | | | | | | | |
| 07 | ಸಾಂಗತ್ಯ –ಸಂಚಿ ಹೊನ್ನಮ್ಮ | **07** | **07** | | | | | | | | **01** | **01** | | | | | | | | |
| 08 | ನಾಗಿಯ ಕಥೆ-ಸು ರಂ. ಎಕ್ಕುಂಡಿ | **13** | **13** | **01** | **02** | | | | | | | **02** | | | | | | | | |
| 09 | ಜಲಗಾರ - ಕುವೆಂಪು | **27** | **27** | **03** | **03** | | | | | | **03** | **02** | | | | | **1** | | | |
| 10 | ಅಲಂಕಾರ | **08** | **08** | | | | | | | | | | | | | | | | | **02** |
| 11 | ಛಂದಸ್ಸು | **08** | **08** | | | | | | | | | | | | | | | | | **02** |
| 12 | ವ್ಯಾಕರಣ / ಭಾಷಾಭ್ಯಾಸ | **10** | **10** | **05** | | | | **01** | | | | | | | | | | | | |
| | | **120** | **120** | | | | | | | | | | | | | | | | | |
| ಒಟ್ಟು ಪ್ರಶ್ನೆಗಳು | | | | **14** | **10** | | | **01** | | | **07** | **09** | | | **01** | **01** | **1** | | | **04** |
| ಒಟ್ಟು ಅಂಕಗಳು | | | | **14** | **20** | | | **05** | | | **21** | **36** | | | **03** | **04** | **1** | | | **16** |
| ಉತ್ತರಿಸಬೇಕಾದ ಅಂಕಗಳು | | | | **14** | **20** | | | **05** | | | **12** | **20** | | | **03** | **04** | **1** | | | **08** |
| ಹೆಚ್ಚುವರಿ ಅಂಕಗಳು | | | | **00** | **00** | | | **0** | | | **09** | **16** | | | **00** | **00** | **1** | | | **08** |
| ಶೇಕಡಾವಾರು ಅಂಕಗಳು | | | | **32.5%** | | | | | **47.5%** | | | | **20%** | | | | | | | |

| | |
|---|---|
| **ಒಟ್ಟು ಪ್ರಶ್ನೆಗಳು** | 48 |
| **ಉತ್ತರಿಸಬೇಕಾದ ಪ್ರಶ್ನೆಗಳು** | 37 |
| **ಹೆಚ್ಚುವರಿ ಪ್ರಶ್ನೆಗಳು** | 11 |
| **ಒಟ್ಟು ಅಂಕಗಳು** | 120 |
| **ಉತ್ತರಿಸಬೇಕಾದ ಅಂಕಗಳು** | 80 |
| **ಹೆಚ್ಚುವರಿ ಅಂಕಗಳು** | 40 |

**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ-(2)-2024-25**

**ವಿಷಯ- ಐಚ್ಚಿಕ ಕನ್ನಡ-(16)**

ತರಗತಿ -ದ್ವಿತೀಯ ಪಿಯುಸಿ ಒಟ್ಟು ಅಂಕಗಳು-80

ಸಮಯ-3 ಗಂಟೆ ಒಟ್ಟು ಪ್ರಶ್ನೆಗಳು 48

---

**ಸೂಚನೆ**:-ವಿಭಾಗ 'ಅ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

**ಅ-ವಿಭಾಗ**

**I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ.** **5x1-5**

1. ಸಭಾ ರಸಭಂಗವಾಗುತ್ತದೆ ಎಂಬ ಭಯ ಉಂಟಾಗಿದ್ದು -
   ಅ) ಆದಿದೇವ ಆ) ಇಂದ್ರ ಇ) ಹರಿಕಾಂತ ಈ)ನಾಭಿರಾಜ
2. ಇವನ ಬಾಣದಿಂದ ಹಂದಿ ನೆಲಕ್ಕೆ ಉರುಳಿತು.
   ಅ) ಅರ್ಜುನ ಆ) ದ್ರೋಣ ಇ) ಶಿವ ಈ) ವರಾಹ
3. ಮಂಜುಗೌಡನ ಮಗಳ ಹೆಸರು.
   ಅ) ನಾಗವೇಣಿ ಆ) ತ್ರಿವೇಣಿ ಇ) ಮಾಯೆ ಈ) ಹಂಸವೇಣಿ
4. ಜಲಗಾರನ ಆರತಿ.
   ಅ) ಪೂಜೆ ಆ) ಸೇವೆ ಇ) ಧ್ಯಾನ ಈ) ಜಲಗಾರ
5. "ಕರ್ಮವಾರಾಧನೆ ಸೇವೆಯೇ ಪೂಜೆ.
   ನನ್ನ ಭಾಗಕ್ಕೆ ಪೊರಕೆ ಆರತಿ. ಗುಡಿಸುವುದೇ
   ನನ್ನ ದೇವರ ಪೂಜೆ!"
   ಈ ಮೇಲಿನ ಸಾಲುಗಳಲ್ಲಿ ಜಲಗಾರನ ನಿಲುವು.
   ಅ) ದೇವರ ನಿರಾಕರಣೆ
   ಆ) ಭಕ್ತಿಯ ನಿರಾಕರಣೆ
   ಇ) ಕಾಯಕದ ಪ್ರತಿಪಾದನೆ
   ಈ) ಸಂಪ್ರದಾಯದ ನಿರಾಕರಣೆ

**II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ** **5x1-5**

6. 'ಉದ್ದರಿ' ಪದದ ಅರ್ಥ______
7. 'ಪ್ರಾಣ' ಪದದ ತದ್ಭವ ರೂಪ_____
8. 'ಅಭವ ' ಪದದ ವಿರುದ್ಧಾರ್ಥಕ ಪದ______
9. ದ್ವಿರುಕ್ತಿಗೆ ಇದು ಉದಾಹರಣೆ________
10. 'ನಿಟಿಲಾಕ್ಷ' ಪದದ ಬಿಡಿಸಿ ಬರೆದ ರೂಪ______

(ಒಂದೊಂದು, ಭವ, ಸಾಲ, ಹರಣ, ಉದ್ದಾರ, ನಿಟಿಲ+ಅಕ್ಷ )

**III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ** **5x1-5**

11.

| | |
|---|---|
| ಅ. ನಾವೆ | -ಕೀಳು, ಧಾನ್ಯ |
| ಆ. ಕಿಂಕರ | -ನೇಹ |
| ಇ. ಕಾಳು | -ಆಳು-ಸೇವಕ |
| ಈ. ತೇಲು | - ನೌಕೆ |
| ಉ. ಸ್ನೇಹ | -ಮುಳುಗು |
| | -ಯಮ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **5x1-5**

12. ಶಿವ ಮೆಚ್ಚಿದ ವಾದ್ಯ ಯಾವುದು?
13. ಯಾರಿಗೆ ಬುದ್ದಿ ಹೇಳಿದರೆ ಪ್ರಯೋಜನವಿಲ್ಲ?
14. ಅಶನ-ವಸನಗಳು ಹೇಗೆ ಸಿಗುತ್ತವೆ?
15. ರೈತ ಶಿವನನ್ನು ನೋಡಲು ಎಲ್ಲಿಗೆ ಹೊರಟಿದ್ದಾನೆ?
16. ಬೀದಿ ಗುಡಿಸುವ ಬಡವನೆದೆಯಲ್ಲಿ ಯಾರಿದ್ದಾರೆ?

## ಆ-ವಿಭಾಗ

**V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **4x2-8**

17. ಬೊಬ್ಬುಳಿಕೆಯಂತೆ ಹುಟ್ಟಿದ್ದು ಏನು?
18. ಅರ್ಜುನನಿಗೆ ಅಪಜಯವಾಗಲು ಕಾರಣವೇನು?
19. ಶಿವನ ನಾಟ್ಯಗತಿಗೆ ಬ್ರಹ್ಮನ ಶಿರ ಹಾಗೂ ಸುರರ ಶಿರೋಮಾಲೆಗಳಿಗೇನಾಯಿತು?
20. ಆನೆ ಹಾಗೂ ಕುರಿಗಳು ಕಬ್ಬನ್ನು ಮೆಲ್ಲುವ ಪರಿ ಹೇಗೆ?
21. ಉದ್ದರಿಯ ಕೊಟ್ಟವನು ಏನೇನಾದನು?

**VI. ಕೆಳಗಿನ ನಾಲ್ಕು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **4x3-12**

22. ದೇಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ
23. ಓರ್ವನೆ ನಿಂದು ಕಾದಿದಯ್.
24. ನಡೆ ತೋರಿದಪಂ ಭಕ್ತನ ನಿಲುವಂ
25. ಗುಣದಯೆಯಿಲ್ಲದುದೇ ಹಗೆ?
26. ಕುವರಿಯಾದೊಡೆ ಕುಂದೇನು?

**VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **2x4-8**

27. ಅಹಂಕಾರ ಗರ್ವಿತನಾದ ಮನುಷ್ಯನಿಗೆ ಕಿರಾತಾರ್ಜುನ ಕಥಾನಕದ ಸಂದೇಶವೇನು?
28. ಆಸೆ-ಆಮಿಷಗಳನ್ನು ವಿವೇಕಯುತವಾಗಿ ಹೇಗೆ ಎದುರಿಸಬೇಕೆಂದು ಚಾಮರಸನ ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿರಿ
29. ಚಿಕ್ಕುಪಾಧ್ಯಾಯ ನಿರೂಪಿಸಿರುವ ದೈವ ಹಾಗೂ ವಿಶ್ವಾಸದ ಪರಿಕಲ್ಪನೆಗಳ ಬಗ್ಗೆ ವಿವರಿಸಿ.
30. ಸಂಚಿಯ ಹೊನ್ನಮ್ಮ ಹೆಣ್ಣಿನ ಬಗ್ಗೆ ಹೆಮ್ಮೆ ಪಡಲು ಕಾರಣವೇನು?

**VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ** **1x4-4**

31. ಕೆಡೆ ಕೆಡೆಯೆಂದಾರ್ದೆಚ್ಚಂ
ಘುಡುಘುಡಿಪ ಮಹಾವರಾಹನಂ ಕೂರ್ಗಣೆಯಿಂ
ಕಡುಗಲಿ ಪಾರ್ಥಂ ನೆರನಂ
ನಡೆ ಗೋಣಡಿಗೊಂಡು ಪಂದಿ ಕೆಡೆದತ್ತಾಗಳ್॥

32. ಕಚ್ಚೆ ನಾಲಗೆ ಮನವು ಇಚ್ಚೆಯಲಿ ಇದ್ದಿಹರೆ
ನುಚ್ಚು ಮಜ್ಜಿಗೆಯು ಹಿತವಕ್ಕು, ಆಯುಷ್ಯ
ಹೆಚ್ಚಾಗಲಿಕ್ಕು ಸರ್ವಜ್ಞ॥

## ಇ-ವಿಭಾಗ

**IX. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **1x2-2**

33. ಕರುವು ಏಕೆ ನಾಚಿಕೊಂಡಿತು?
34. ನಾಗಿಯ ಕಥೆಯಲ್ಲಿ ಇರುಳಿನ ವರ್ಣನೆ ಹೇಗೆ ಮೂಡಿಬಂದಿದೆ?

**X. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4-4**

35. ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ವರ್ಣಿಸಿರಿ.
36. ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ದುರಂತ ಕಥೆಯೇ? ವಿವರಿಸಿ.

## ಈ-ವಿಭಾಗ

**XI. ಕೆಳಗಿನ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x2-4**

37. ರೈತನ ಗೆಳೆಯರು ಯಾರು?
38. ಗುಡಿಗಳು ಯಾರ ಗೂಡುಗಳು ಎಂದು ತಿರುಕ ಹೇಳುತ್ತಾನೆ?
39. ಜಲಗಾರ ಯಾವುದನ್ನು ಒಲ್ಲೆ ಎನ್ನುತ್ತಾನೆ?

**XII. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **2x3-6**

40. ಒಂದು ದಿನವಾದರೂ ವಿಶ್ರಾಂತಿ ಇರಲಿ.
41. ಬಡವರಿಗೆ ಬಡವರಲ್ಲದೇ ಬೇರೆ ಗತಿಯುಂಟೆ.
42. ಗುಡಿಯ ನುಗ್ಗುವ ಮುನ್ನವೇ ಶಿವನ ಹೊರಗಟ್ಟಿ ನುಗ್ಗುವರು.

**XIII. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4-4**

43. ನೇಗಿಲಯೋಗಿಗೆ ಮುಕ್ತಿ ತೋರುವ ಹಾದಿ ಯಾವುದು? ವಿವರಿಸಿ.
44. ಜಗದ ಜಲಗಾರ ಯಾರು ? ವಿವರಿಸಿ.

## ಉ-ವಿಭಾಗ

**XIV. ಕೆಳಗಿನ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ 1x4-4**

45. ಒಕ್ಕುದು ನೆತ್ತರ್ ಬಾಯಿಂ
ಮಿಕ್ಕಲರ್ದುಸಿರಿಡುವ ಮೂಗಿನೆರಡುಂ ಕಡೆಯಿಂ
ದಕ್ಕಟ ತಪ್ಪಾಯ್ತೆನುತಂ
ಮುಕ್ಕಣ್ಣಂ ಮಱುಗಿ ಮನದೆ ಸಿಡಿಮಿಡಿಗೊಂಡಂ

46. ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ

**XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ.** **1x4-4**

47. ವದನಾರವಿಂದ

48. ಉಗುಳಿ ಉಗುಳಿ ರೋಗ ; ಹಾಡಿ ಹಾಡಿ ರಾಗ.